ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 88-94
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟ : ಒಂದು ಅವಲೋಕನ

**ಡಾ. ರಾಜೇಶ ಎಂ**

ಅತಿಥಿ ಉಪನ್ಯಾಸಕರು, ಭೂಗೋಳಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ.

**Abstract:**

*ನಂದಿಬೆಟ್ಟವು ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲೂಕಿನಲ್ಲಿದ್ದು, ರಾಜ್ಯದ ಪ್ರಖ್ಯಾತ ಗಿರಿಧಾಮಗಳಲ್ಲಿ ಒಂದಾಗಿದೆ. ಇದು ಬೆಂಗಳೂರಿನಿಂದ ಸುಮಾರು 65 ಕಿ.ಮೀ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕಿನಿಂದ 21 ಕಿ.ಮೀ ದೂರದಲ್ಲಿದೆ. ನಂದಿಬೆಟ್ಟವನ್ನು ಶಾಸನಗಳು ನಂದಿಗಿರಿ ಎಂತಲೂ, ಸಾಹಿತ್ಯ ಕೃತಿಗಳು ನಂದಿದುರ್ಗ, ಕೂಷ್ಮಾಂಡಗಿರಿ ಎಂಬ ಹೆಸರುಗಳಿಂದ ಕರೆದಿವೆ. ನಂದಿಬೆಟ್ಟಕ್ಕೆ ಹೊಂದಿಕೊಂಡಂತೆ ಚನ್ನಗಿರಿ, ಬ್ರಹ್ಮಗಿರಿ, ದಿಬ್ಬಗಿರಿ, ಸ್ಕಂದಗಿರಿ ಎಂಬ ಬೆಟ್ಟಗಳು ಇವೆ. ಇದನ್ನು ಪಂಚಗಿರಿ ಕ್ಷೇತ್ರ ಎಂದು ಕರೆಯಲ್ಪಡುತ್ತದೆ.*

**Keywords:** *ನಂದಿಬೆಟ್ಟ, ಚಿಕ್ಕಬಳ್ಳಾಪುರ, ಗಡಿಜಿಲ್ಲೆ, ನಂದಿಗ್ರಾಮ, ಕೂಷ್ಮಾಂಡ ಪರ್ವತ.*

## ಪೀಠಿಕೆ

ಚಿಕ್ಕಬಳ್ಳಾಪುರ ಜಿಲ್ಲೆಯು ಕರ್ನಾಟಕ ರಾಜ್ಯದ ಗಡಿ ಜಿಲ್ಲೆಯಾಗಿದ್ದು, ಈ ಮುಂಚೆ ಕೋಲಾರ ಜಿಲ್ಲೆಯ ಅವಿಭಾಜ್ಯ ಅಂಗವಾಗಿತ್ತು. 2007ರಲ್ಲಿ ಕರ್ನಾಟಕ ಸರ್ಕಾರವು ಆಡಳಿತಾತ್ಮಕ ಹಿತದೃಷ್ಟಿಯಿಂದ ಕೋಲಾರ ಜಿಲ್ಲೆಯನ್ನು ವಿಭಜಿಸಿ ಹೊಸದಾಗಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಸೃಜಿಸಲಾಯಿತು. ಹೊಸ ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಾಗೇಪಲ್ಲಿ, ಗೌರಿಬಿದನೂರು, ಗುಡಿಬಂಡೆ ಹಾಗೂ ಚಿಂತಾಮಣಿ ಎಂಬ ಆರು ತಾಲೂಕುಗಳು ಸೇರಿದ್ದವು. 2021ರಲ್ಲಿ ಕರ್ನಾಟಕ ಸರ್ಕಾರವು ಹೊಸ ತಾಲೂಕುಗಳ ಘೋಷಣೆ ಮಾಡಿದಾಗ ಗೌರಿಬಿದನೂರು ತಾಲೂಕಿಗೆ ಮಂಚೇನಹಳ್ಳಿ ಮತ್ತು ಬಾಗೇಪಲ್ಲಿ ತಾಲೂಕಿಗೆ ಸೇರಿದ್ದ ಚೇಳೂರು ಎಂಬ ಎರಡು ಹೊಸ ತಾಲೂಕುಗಳು ಉದಯವಾದವು. ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಎಂಟು ತಾಲ್ಲೂಕುಗಳಿವೆ. ಚಿಕ್ಕಬಳ್ಳಾಪುರ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು 42,244 ಚ.ಕಿ.ಮೀ ಗಳು (1639 ಚದರ ಮೈಲಿಗಳು). ಚಿಕ್ಕಬಳ್ಳಾಪುರ ಜಿಲ್ಲೆಯು $13.43^0$ ಉತ್ತರ ಮತ್ತು $77.72^0$ ಪೂರ್ವ ಅಕ್ಷಾಂಶ ಮತ್ತು ರೇಖಾಂಶಗಳನ್ನೊಂದಿದೆ. ಜಿಲ್ಲೆಯು ಪೂರ್ವದಲ್ಲಿ ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲೂಕು, ಕೋಲಾರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕು, ಪಶ್ಚಿಮದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕು ಮತ್ತು ತುಮಕೂರು ಜಿಲ್ಲೆ, ಉತ್ತರದಲ್ಲಿ ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆಯ ಹಿಂದೂಪುರ ಮತ್ತು ಪೆನುಗೊಂಡ ತಾಲೂಕುಗಳು ಹಾಗೂ ದಕ್ಷಿಣಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕುಗಳಿಂದ ಸುತ್ತುವರೆಯಲ್ಪಟ್ಟಿವೆ.

ಕರ್ನಾಟಕ ರಾಜ್ಯದ ಅವಿಭಜಿತ ಕೋಲಾರ ಜಿಲ್ಲೆಯು ಸಂಸ್ಕೃತಿ ಮತ್ತು ಪರಂಪರೆಗಳಿಗೆ

***Please cite this article as:*** ರಾಜೇಶ ಎಂ. (2024). ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 2(6), 88–94.

ಹೆಸರಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯು ಕನ್ನಡ, ತೆಲುಗು, ತಮಿಳು ಭಾಷೆಗಳ ಸಮ್ಮಿಲನವನ್ನು ಹೊಂದಿದ್ದು, ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದೆ. ಈ ಜಿಲ್ಲೆಯು ಜಾನಪದ, ದೇವಾಲಯ ವಾಸ್ತುಶಿಲ್ಪ, ಕಲೆಗಳು ಮುಂತಾದ ಕ್ಷೇತ್ರಗಳಿಗೆ ಕೊಡುಗೆಯನ್ನು ನೀಡಿದೆ. ಈ ಭಾಗದಲ್ಲಿ ಗ್ರಾಮೀಣ ಸೊಬಗಿನ ತಮಟೆವಾದನ, ಪಂಡರಿ ಭಜನೆ, ಗಾರುಡಿಗೊಂಬೆಗಳ ನರ್ತನ, ಬಯಲಾಟ, ಕೇಳಿಕೆಗಳು, ವಿವಿಧ ರೀತಿಯ ಕರಗ ಉತ್ಸವಗಳು ಮುಂತಾದವುಗಳು ಇಂದಿಗೂ ಅಸ್ತಿತ್ವದಲ್ಲಿರುವುದನ್ನು ನಾವು ಕಾಣಹುದಾಗಿದೆ. ಸರ್.ಎಂ.ವಿಶ್ವೇಶ್ವರಯ್ಯ, ಕೆ.ಸಿ.ರೆಡ್ಡಿ, ಮಾಸ್ತಿವೆಂಕಟೇಶ ಅಯ್ಯಂಗಾರ್, ತೀ.ತಾ.ಶರ್ಮ. ಹೆಚ್.ನರಸಿಂಹಯ್ಯ, ಸಿ.ಎನ್.ಆರ್.ರಾವ್ ಮುಂತಾದವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗಮನವನ್ನು ಸೆಳೆದಿದ್ದಾರೆ.

ಚಿಕ್ಕಬಳ್ಳಾಪುರ ತಾಲೂಕಿನ ಭೌಗೋಳಿಕ ವಿಸ್ತೀರ್ಣವು 639 ಚ.ಕಿ.ಮೀ ಗಳಾಗಿರುತ್ತದೆ. ಚಿಕ್ಕಬಳ್ಳಾಪುರ ತಾಲ್ಲೂಕು ದಕ್ಷಿಣಕಾಶಿ ಎಂದು ಹೆಸರುವಾಸಿಯಾಗಿರುವ ನಂದಿ, ನಂದಿಬೆಟ್ಟ, ಕಳವಾರ ಪಾಪಾಘ್ನಿಮಠ, ರಂಗಸ್ಥಳ, ಶ್ರೀನಿವಾಸ ಸಾಗರ ಮುಂತಾದ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಯ ಪ್ರದೇಶಗಳನ್ನು ಒಳಗೊಂಡಿದೆ.

ಭೌಗೋಳಿಕವಾಗಿ ನಂದಿಬೆಟ್ಟವು ಸಮುದ್ರ ಮಟ್ಟಕ್ಕಿಂತ 4,851 ಅಡಿ ಎತ್ತರದಲ್ಲಿದೆ. ಇದರ ಅಕ್ಷಾಂಶ ಮತ್ತು ರೇಖಾಂಶಗಳು ಅನುಕ್ರಮವಾಗಿ ಪೂರ್ವಕ್ಕೆ $77.53^0$ ಮತ್ತು ಪಶ್ಚಿಮಕ್ಕೆ $13.22^0$ ಆಗಿರುತ್ತದೆ. ನಂದಿಬೆಟ್ಟ ಪ್ರದೇಶವು ಪೂರ್ವ–ಪಶ್ಚಿಮ ಮೂರು ಫರ್ಲಾಂಗಿನಷ್ಟು ಹಾಗೂ ಉತ್ತರ–ದಕ್ಷಿಣ ಅರ್ಧ ಫರ್ಲಾಂಗಿನಷ್ಟು ಇದ್ದು ಮೊಟ್ಟೆಯಾಕಾರದಲ್ಲಿದೆ. ಉತ್ತರ ಪಾಲಾರ್, ದಕ್ಷಿಣ ಪೆನ್ನಾರ್, ಉತ್ತರ ಪಿನಾಕಿನಿ ದಕ್ಷಿಣ ಪಿನಾಕಿನಿ, ಚಿತ್ರಾವತಿ, ಅರ್ಕಾವತಿ, ಪಾಪಾಘ್ನಿ ಮುಂತಾದ ನದಿಗಳು ನಂದಿಬೆಟ್ಟದ ಶ್ರೇಣಿಗಳಲ್ಲಿ ಹುಟ್ಟುತ್ತವೆ. ರಾಜ್ಯದಲ್ಲಿ ಪಶ್ಚಿಮ ಘಟ್ಟಗಳನ್ನು ಹೊರತುಪಡಿಸಿದರೆ, ನಂದಿಬೆಟ್ಟಗಳ ಶ್ರೇಣಿಯು ಹಲವು ನದಿಗಳ ಉಗಮಸ್ಥಾನವೆಂದು ಕರೆಯಲ್ಪಟ್ಟಿವೆ. ಸಸ್ಯ ಮತ್ತು ಪ್ರಾಣಿ ಜೀವಸಂಕುಲಗಳಿಗೆ ಹಾಗೂ ಉತ್ತಮ ಹವಾಗುಣಕ್ಕೆ ಹೆಸರುವಾಸಿಯಾಗಿದೆ. ನಂದಿಬೆಟ್ಟ ಸುತ್ತಮುತ್ತಲೂ ರಕ್ಷಿತ ಅರಣ್ಯ ಪ್ರದೇಶವಿದ್ದು, ಇಲ್ಲಿ ಅನೇಕ ರೀತಿಯ ವನ್ಯಮೃಗಗಳು ಕಾಣಸಿಗುತ್ತವೆ. ಈ ಪ್ರದೇಶದಲ್ಲಿ ವಿವಿಧ ರೀತಿಯ ವೃಕ್ಷಗಳು, ಆಯುರ್ವೇದದ ಅಮೂಲ್ಯ ಗಿಡಮೂಲಿಕೆಗಳಿವೆ. ಇದು ಸಸ್ಯವರ್ಗ ಮತ್ತು ಪ್ರಾಣಿವರ್ಗಗಳಿಂದಾಗಿ ಜೀವವೈವಿಧ್ಯತೆಯ ಪಾರಂಪರಿಕ ತಾಣವೆಂದು ಗುರುತಿಸಲ್ಪಟ್ಟಿದೆ. ಈ ಗಿರಿಧಾಮದಲ್ಲಿ ವರ್ಷಪೂರ್ತಿ ಹಿತಕರವಾದ ವಾತಾವರಣವು ಇರುತ್ತವೆ. ನಂದಿಬೆಟ್ಟವನ್ನು ದೇವನಹಳ್ಳಿ–ಕಾರಹಳ್ಳಿ ರಸ್ತೆ ಮಾರ್ಗವಾಗಿ ಬೆಟ್ಟದ ಕ್ರಾಸ್ ಮೂಲಕ ಪ್ರವೇಶಿಸಬಹುದು, ಬೆಟ್ಟಕ್ಕೇರಲು ಪಶ್ಚಿಮ ಮುಖದಲ್ಲಿ ದಕ್ಷಿಣದಿಂದ ಒಂದು ಕುದುರೆ ದಾರಿಯೂ ಹಾಗೂ ಬಸವಣ್ಣ ಕಣಿವೆಯ ಭಾಗದಲ್ಲಿ ಇನ್ನೊಂದು ಕುದುರೆ ದಾರಿಯೂ ಇದೆ. ಇದರ ಜೊತೆಗೆ ಬೆಟ್ಟವನ್ನು ಏರಿ ಹೋಗಲು ಸುಲ್ತಾನ್‌ಪೇಟೆ ಕಡೆಯಿಂದ ಮೆಟ್ಟಿಲುಗಳ ವ್ಯವಸ್ಥೆಯಿದ್ದು ಸುಮಾರು 1400 ಮೆಟ್ಟಿಲುಗಳು ಇವೆ.

ನಂದಿಗ್ರಾಮ ಮತ್ತು ನಂದಿಬೆಟ್ಟಗಳು ಒಂದಕ್ಕೊಂದು ಪೂರಕವಾದ ಸಂಬಂಧಗಳನ್ನು ಹೊಂದಿವೆ. ನಂದಿಬೆಟ್ಟದ ಕೆಳಭಾಗದಲ್ಲಿರುವ ನಂದಿಯಲ್ಲಿರುವ ಶಿವಾಲಯದಿಂದ ಬೆಟ್ಟವು ನಂದಿಬೆಟ್ಟವೆಂದು ಹೆಸರಾಗಿದೆ. ನಂದಿಕ್ಷೇತ್ರವು ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿಯೂ ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನಂದಿಯು ಈ ಭಾಗದಲ್ಲಿ ದಕ್ಷಿಣದ ಕಾಶಿಯೆಂದು ಹೆಸರಾಗಿದೆ. ಸ್ಥಳಪುರಾಣದ ಪ್ರಕಾರ ಈ ಹಿಂದೆ ಇಲ್ಲಿ ಕೂಷ್ಮಂಡು ಋಷಿ ಆಶ್ರಮವನ್ನು ಸ್ಥಾಪಿಸಿ ತಪಸ್ಸು

ಮಾಡುತ್ತಿದ್ದರಿಂದ ನಂದಿಗಿರಿಯನ್ನು 'ಕೂಷ್ಮಾಂಡ ಪರ್ವತ' ಎಂಬ ಹೆಸರಿನಿಂದ ಕರೆಯಲಾಗಿದೆ.

ನಂದಿ ಮತ್ತು ನಂದಿಬೆಟ್ಟ ಪ್ರದೇಶಗಳು ಐತಿಹಾಸಿಕವಾಗಿ ಬಾಣರು, ನೊಳಂಬರು ಮುಂತಾದ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ 9ನೇ ಶತಮಾನದಲ್ಲಿ ಬಾಣರು ಮತ್ತು ನೊಳಂಬರ ಕಾಲದಲ್ಲಿ ನಂದಿಯಲ್ಲಿ ಶಿವಾಲಯಗಳು ನಿರ್ಮಾಣವಾದವು. ನಂತರ ಈ ಪ್ರದೇಶವು ಗಂಗರ ಅಳ್ವಿಕೆಗೆ ಒಳಪಟ್ಟಿತ್ತು. ಗಂಗರು ತಮ್ಮನ್ನು ನಂದಿಗಿರಿ ಒಡೆಯರು, ನಂದಿಗಿರಿನಾಥ ಎಂದು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. ಈ ಪ್ರದೇಶವು ಗಂಗರ ಕಾಲದಲ್ಲಿ ಗಂಗವಾಡಿ 96,000ದ ಭಾಗವಾಗಿತ್ತು. ಗಂಗರು ಈ ಭಾಗದಲ್ಲಿ ಕೆರೆ ನೀರಾವರಿ ಮತ್ತು ಕ್ರಮಬದ್ಧವಾದ ಆಡಳಿತಕ್ಕೆ ಆದ್ಯತೆ ನೀಡಿದರು. ನಂತರ ಈ ಪ್ರದೇಶವು ಚೋಳರ ಅಧೀನಕ್ಕೆ ಒಳಪಟ್ಟಿತ್ತು. ಚೋಳರ ಕಾಲದಲ್ಲಿ ತಮಿಳು ಭಾಷೆಯು ಅಸ್ತಿತ್ವವನ್ನು ಪಡೆದುಕೊಂಡಿದ್ದು, ಶೈವ ಮತಾವಲಂಬಿಗಳಾದ ಚೋಳರು ನಂದಿ ಮತ್ತು ನಂದಿಬೆಟ್ಟದ ಶಿವಾಲಯಗಳ ವಿಸ್ತರಣೆ ಮತ್ತು ಜೀರ್ಣೋದ್ಧಾರಕ್ಕೆ ಪ್ರಾಶಸ್ತ್ಯ ನೀಡಿದರು. ಈ ಪ್ರದೇಶವು ರಾಷ್ಟ್ರಕೂಟರ ಹಾಗೂ ಹೊಯ್ಸಳರ ಅಳ್ವಿಕೆಯಲ್ಲಿ ಸಣ್ಣೆನಾಡಿನ ಭಾಗವಾಗಿತ್ತು ಹಾಗೂ ಹೊಯ್ಸಳರ ಅರಸ ವೀರರಾಮನಾಥನ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರದ ಅರಸರ ಕಾಲದಲ್ಲಿ ನಂದಿಯ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳ ನವರಂಗದ ವಿಸ್ತರಣೆ ಮತ್ತು ಜೀರ್ಣೋದ್ಧಾರ ಮಾಡಲಾಯಿತು. ವಿಜಯನಗರದ ಅರಸರ ಕಾಲದಲ್ಲಿ ಈ ಭಾಗದಲ್ಲಿ ನಾಯಂಕರ ಪದ್ಧತಿ ಅಸ್ತಿತ್ವದಲ್ಲಿತ್ತು. ಅವರ ಪರವಾಗಿ, ಸಾಮಂತರಾಗಿ ಆವತಿ ನಾಡಪ್ರಭುಗಳು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಹಾಗೂ ಸುಗಟೂರು ಪಾಳೆಯಗಾರರು ಈ ಭಾಗದಲ್ಲಿ ಆಳ್ವಿಕೆ ನಡೆಸಿದರು. ಚಿಕ್ಕಬಳ್ಳಾಪುರ ಶಾಸನ ಸಂಖ್ಯೆ 40 (ಕುಡವತಿ ಗ್ರಾಮ) ಆವತಿ ಮತ್ತು ಇತರೆ ಪಾಳೆಯಗಾರರ ಮೂಲ ಮತ್ತು ಇನ್ನಿತರೆ ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಆವತಿ ನಾಡಪ್ರಭುಗಳು ನಂದಿಯ ಎರಡು ಶಿವಾಲಯಗಳ ಅಭಿವೃದ್ಧಿಗೆ ಸಹಕರಿಸಿದ ವಿಷಯಗಳು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರಿನ ಒಡೆಯರ್ ಕಾಲದಲ್ಲಿ ಹೈದರಾಲಿಯು ಈ ಪ್ರದೇಶದ ಪಾಳೆಯಗಾರನಾದ ಚಿಕ್ಕಪ್ಪಗೌಡನನ್ನು 1761ರಲ್ಲಿ ಸೋಲಿಸಿ ನಂದಿ ಮತ್ತು ನಂದಿಬೆಟ್ಟವನ್ನು ಮೈಸೂರು ಪ್ರಾಂತ್ಯಕ್ಕೆ ಸೇರಿಸಿದನು. ನಂತರ ಈ ಪ್ರದೇಶವು ಟಿಪ್ಪುಸುಲ್ತಾನನ ಅಳ್ವಿಕೆಗೆ ಒಳಪಟ್ಟಿತ್ತು. ತದನಂತರ ಕ್ರಿ.ಶ 1761ರಲ್ಲಿ ಈ ಪ್ರದೇಶವು ಲಾರ್ಡ್ ಕಾರ್ನ್‌ವಾಲೀಸನ ಕಾಲದಲ್ಲಿ ಬ್ರಿಟಿಷರ ಅಧೀನಕ್ಕೆ ಒಳಪಟ್ಟಿತ್ತು. ಕ್ರಿ.ಶ 1799ರಲ್ಲಿ ಟಿಪ್ಪುವಿನ ಪತನದ ನಂತರ ಈ ಪ್ರದೇಶವು ಮೈಸೂರು ಪ್ರಾಂತ್ಯಕ್ಕೆ ಸೇರ್ಪಡೆಗೊಂಡಿತು.

ನಂದಿಬೆಟ್ಟದ ಬುಡದಲ್ಲಿರುವ ನಂದಿಗ್ರಾಮವು ಭೋಗೇಶ್ವರ ಮತ್ತು ಅರುಣಾಚಲೇಶ್ವರ ಎಂಬ ಎರಡು ಶಿವಾಲಯಗಳಿಗೆ ಹೆಸರುವಾಸಿಯಾಗಿದೆ. ಕ್ರಿ.ಶ 806ರ ರಾಷ್ಟ್ರಕೂಟರ ಅರಸ 3ನೇ ಗೋವಿಂದನ ನಂದಿ ತಾಮ್ರಪಟದಿಂದ ಮಹಾನಂದೀಶ್ವರ ದೇವಾಲಯವು ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ಇದೇ ಅರಸನ ಕ್ರಿ.ಶ 810ರ ತಾಮ್ರಪಟದಲ್ಲಿ ಬಾಣವಂಶದ ಅರಸ ಬಾಣವಿದ್ಯಾಧರನ ರಾಣಿ ರತ್ನಾವಳಿಯು ನಂದಿಯಲ್ಲಿ ಶಿವಾಲಯವೊಂದನ್ನು ನಿರ್ಮಿಸಿದಳು. ಈ ಎರಡು ದೇವಾಲಯಗಳು ಹೆಚ್ಚು ಕಡಿಮೆ ಒಂದೇ ಅಳತೆಯಲ್ಲಿ ನಿರ್ಮಾಣವಾಗಿದ್ದು, ಎತ್ತರದ ವೇದಿಕೆ ಮೇಲೆ ನಿರ್ಮಿಸಲ್ಪಟ್ಟಿವೆ. ನಂದಿಬೆಟ್ಟವು ಯೋಗನಂದೀಶ್ವರ ದೇವಾಲಯಕ್ಕೆ ಹೆಸರುವಾಸಿಯಾಗಿದೆ. ಈ ದೇವಾಲಯದ ಪ್ರವೇಶದ್ವಾರದಲ್ಲಿ ನಾಗರಲಿಪಿಯ ಶಾಸನಗಳಿವೆ. ದೇವಾಲಯದಲ್ಲಿ ವಿಜಯನಗರ ಕಾಲದ ನವರಂಗ ಮತ್ತು ಉಬ್ಬುಶಿಲ್ಪಗಳಿವೆ. ಈ ದೇವಾಲಯದ

ಪಕ್ಕದಲ್ಲಿ ನೀರಿನ ದೊಣೆಗಳಿವೆ. ಗವಿವೀರಭದ್ರಸ್ವಾಮಿ ದೇವಾಲಯವು ಶೈವ/ರಾಚೋಟಿ ಸಂಪ್ರದಾಯಕ್ಕೆ ಹೆಸರಾಗಿದೆ. ರಸ್ತೆ ಬದಿಯಲ್ಲಿರುವ ಕಣಿವೆಬಸವಣ್ಣ ದೇವಾಲಯವು ಏಕಶಿಲಾ ಕೆತ್ತನೆಗೆ ಹೆಸರುವಾಸಿಯಾಗಿದೆ.

ನಂದಿ ಮತ್ತು ನಂದಿಬೆಟ್ಟದ ಸುತ್ತಮುತ್ತಲೂ ಶಿಲ್ಪಗಳು, ಸ್ಮಾರಕಗಳು–ವೀರಗಲ್ಲುಗಳು, ಮಾಸ್ತಿಗಲ್ಲುಗಳು ಕಂಡುಬಂದಿವೆ. ಈ ಭಾಗದಲ್ಲಿ ಸ್ಥಾನಕಭಂಗಿಯಲ್ಲಿ ಕೈ ಮುಗಿಯುತ್ತಿರುವ ಪಾಳೆಯಗಾರರ ಶಿಲ್ಪಗಳು, ಲಜ್ಜೆಗೌರಿ ಮತ್ತು ಚಂಚುಲಕ್ಷ್ಮಿ ಶಿಲ್ಪಗಳು ಕಂಡುಬಂದಿವೆ. ತಿಪ್ಪೇನಹಳ್ಳಿ ಮುಂತಾದ ಕಡೆಗಳಲ್ಲಿ ವೀರಗಲ್ಲುಗಳು ಮತ್ತು ವೀರ ಮಾಸ್ತಿಗಲ್ಲುಗಳು ಕಂಡುಬಂದಿವೆ.

ನಂದಿಬೆಟ್ಟದಲ್ಲಿ ಐತಿಹಾಸಿಕ ಕೋಟೆಯಿದೆ. ಈ ಕೋಟೆಯು ಚಿಕ್ಕಬಳ್ಳಾಪುರದ ಪಾಳೆಯಗಾರನಾಗಿದ್ದ ಚಿಕ್ಕಭೈರೇಗೌಡನ ಮಗ ಮರೀಗೌಡನಿಂದ ನಿರ್ಮಿಸಲ್ಪಟ್ಟಿತು ಎಂದು ದಾಖಲೆಗಳಿಂದ ತಿಳಿದುಬರುತ್ತದೆ. ಆದರೆ ಈಗ ಕಂಡುಬಂದಿರುವ ಕೋಟೆ–ಕೊತ್ತಲಗಳ ಭಾಗಗಳು ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಹೆಚ್ಚು ಕಡಿಮೆ ಒಂದೇ ಅಳತೆಯಲ್ಲಿ ಕತ್ತರಿಸಿದ ಬಿಳಿ ಕಣಶಿಲೆಗಳನ್ನು ಒಂದರ ಮೇಲೊಂದು ಜೋಡಿಸಲಾಗಿದೆ. ಕೋಟೆ ಗೋಡೆಯ ಮೇಲೆ ಸುಟ್ಟ ಇಟ್ಟಿಗೆ ಮತ್ತು ಗಾರೆಯ ಕೈಪಿಡಿಗಳಿವೆ. ಗೋಡೆಯಲ್ಲಿ ಫಿರಂಗಿ ಬಂದೂಕಿನ ಕಿಂಡಿಗಳಿವೆ. ಈ ಕೋಟೆಯು ರಚನೆಯಲ್ಲಿ ಈ ಭಾಗಕ್ಕೆ ಹೊಂದಿಕೊಂಡಿರುವ ನೆಲದುರ್ಗದ ದೇವನಹಳ್ಳಿ ಕೋಟೆಯನ್ನು ಹೋಲುತ್ತದೆ. ನಂದಿದುರ್ಗದ ರಕ್ಷಣೆಗಾಗಿ ಟಿಪ್ಪು ವಿಶೇಷವಾದ ಆಸಕ್ತಿಯನ್ನು ವಹಿಸಿ ಲತೀಫ್ ಬೇಗ್ ಎಂಬ ಅಧಿಕಾರಿಯನ್ನು ನೇಮಿಸಿದನು. ಕ್ರಿ.ಶ 1791ರಲ್ಲಿ ಬ್ರಿಟಿಷರ ಲಾರ್ಡ್ ಕಾರ್ನ್‌ವಾಲಿಸನು ಟಿಪ್ಪುವನ್ನು ಸೋಲಿಸಿ ನಂದಿದುರ್ಗವನ್ನು ವಶಪಡಿಸಿಕೊಂಡನು. ಈ ಕೋಟೆಯ ಬಗ್ಗೆ ಕರ್ನಲ್‌ವಿಲ್ಕ್ಸ್‌ನು ತನ್ನ ವರದಿಯಲ್ಲಿ ಪ್ರಸ್ತಾಪಿಸಿದ್ದಾನೆ. ನಂದಿಬೆಟ್ಟದ ಕೋಟೆಯು ಗಿರಿದುರ್ಗವಾಗಿದ್ದು ರಕ್ಷಣಾ ವಾಸ್ತುಶಿಲ್ಪಕ್ಕೆ ಹೆಸರಾಗಿದೆ.

ಹೊಸ ಜಿಲ್ಲೆಯಾಗಿ ರಚನೆಯಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ ದೊರೆತಿರುವ ಶಾಸನಗಳ ಸಂಖ್ಯೆ ಸುಮಾರು 624. ಇವುಗಳನ್ನು ಬಿ.ಎಲ್.ರೈಸ್ ಸಂಪಾದಕತ್ವದ ಎಫಿಗ್ರಾಫಿಯ ಕರ್ನಾಟಿಕ ಸಂಪುಟ–10ರಲ್ಲಿ ಪ್ರಕಟವಾಗಿವೆ. ಈ ಶಾಸನಗಳಲ್ಲಿ ಕನ್ನಡ, ಸಂಸ್ಕೃತ, ತಮಿಳು, ತೆಲುಗು ಹಾಗೂ ಪಾರ್ಸಿ ಭಾಷೆಯ ಶಾಸನಗಳು ಸೇರಿವೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಈವರೆಗೆ ಸುಮಾರು 137 ಶಾಸನಗಳು ಪ್ರಕಟಗೊಂಡಿವೆ. ಇತ್ತೀಚೆಗೆ ಹಲವಾರು ಶಾಸನಗಳು ಪತ್ತೆಯಾಗಿ ಪ್ರಕಟಗೊಂಡಿವೆ. ನಂದಿಮಂಡಲ ಪರಿಸರದಲ್ಲಿ ನಂದಿಬೆಟ್ಟದ ಯೋಗನಂದೀಶ್ವರ ಮತ್ತು ನಂದಿಯ ಶಿವಾಲಯಗಳಲ್ಲಿ ಕನ್ನಡ, ನಾಗರಿ ಮತ್ತು ಇತರೆ ಭಾಷೆಯ ಶಾಸನಗಳು ಕಂಡುಬಂದಿವೆ. ಚಿಕ್ಕಬಳ್ಳಾಪುರ ತಾಲ್ಲೂಕು ಕುಡುವತ್ತಿ ಗ್ರಾಮದ (ಸಿಬಿ–40) ಶಾಸನವು ಆವತಿ ಮತ್ತು ಚಿಕ್ಕಬಳ್ಳಾಪುರ ಪಾಳೆಯಗಾರದ ಮೂಲ ಪುರುಷರು, ಭೈರವ, ಕರಗದಮ್ಮಗಳ ಆರಾಧನೆ ಹಾಗೂ ಶೈವ ಗುರುಪರಂಪರೆಗಳ ಬಗ್ಗೆ ಉಲ್ಲೇಖಿಸುತ್ತದೆ.

ನಂದಿಯು ಶೈವ, ವೈಷ್ಣವ, ಜೈನ, ವೀರಶೈವ, ಇಸ್ಲಾಂ ಮುಂತಾದ ಧಾರ್ಮಿಕ ಸಂಸ್ಕೃತಿಗಳಿಗೆ ಹೆಸರಾಗಿದೆ. ಈ ಭಾಗದಲ್ಲಿ ಶೈವಸಂಪ್ರದಾಯವು ಪ್ರಮುಖವಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಅನೇಕ ಸ್ಮಾರಕಗಳು ಮತ್ತು ಶೈವ ದೇವಾಲಯಗಳು ಈ ಭಾಗದಲ್ಲಿ ಕಂಡುಬಂದಿವೆ. ಬಾಣರು ಮತ್ತು ನೊಳಂಬರ ಕಾಲದಲ್ಲಿ ನಂದಿಗ್ರಾಮದಲ್ಲಿ ದೇವಾಲಯಗಳು ನಿರ್ಮಾಣಗೊಂಡು ಅನಂತರ ಕಾಲದಲ್ಲಿ ಜೀರ್ಣೋದ್ಧಾರಗಳಿಂದ ರೂಪಾಂತರವಾಗಿದೆ. ಇದನ್ನು ನಂದಿಬೆಟ್ಟದ ಯೋಗನಂದೀಶ್ವರ, ನಂದಿಯ ಭೋಗನಂದೀಶ್ವರ, ಅರುಣಾಚಲೇಶ್ವರ ದೇವಾಲಯಗಳಲ್ಲಿ ಸ್ಪಷ್ಟವಾಗಿ

ಗುರುತಿಸಬಹುದು. ಈ ಭಾಗದಲ್ಲಿ ವೀರಶೈವ ಧರ್ಮವು ಇರುವಿಕೆ ಬಗ್ಗೆ ದಾಖಲೆಗಳು ದೊರಕುತ್ತವೆ. ನಂದಿಗ್ರಾಮವು ಬಹಳ ಹಿಂದಿನಿಂದಲೂ ಶೈವಮತ ಅನುಯಾಯಿಗಳ ವಾಸಸ್ಥಾನವಾಗಿತ್ತೆಂದು ಹಿಂದೆ ಜಂಗಮ ಗುರುಗಳೊಬ್ಬರು ಹುಲಿಯ ಮೇಲೆ ಓಡಾಡುತ್ತಿದ್ದಾರೆಂಬ ಪ್ರತೀತಿಯಿದೆ. ಇಲ್ಲಿರುವ ಮಠವನ್ನು ಹಿಂದಿಗೂ ಹುಲಿಮಠವೆಂದು ಜನರು ಕರೆಯುತ್ತಾರೆ. ಇಂದಿಗೂ ಜಂಗಮಮಠಗಳ ಶಿಥಿಲ ಕಟ್ಟಡಗಳು ನಮಗೆ ನಂದಿಗ್ರಾಮದಲ್ಲಿ ಕಾಣಸಿಗುತ್ತವೆ. ದೇವಾಲಯಗಳು ಮಠಗಳನ್ನು ಹೊಂದಿರುತ್ತಿದ್ದವು. ದೇವಾಲಯಗಳು ಮತ್ತು ಮಠಗಳಿಗೆ ದಾನದತ್ತಿ ನೀಡಿರುವುದು ಶಾಸನೋಕ್ತವಾಗಿದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟ ವ್ಯಾಪ್ತಿಯ ಗೋಪಿನಾಥ ಬೆಟ್ಟದಲ್ಲಿನ ಗೋಪಿನಾಥ ದೇವಾಲಯದ ಬಳಿಯಿರುವ ಕ್ರಿ.ಶ 750ರ ಜೈನಶಾಸನವು ದಾಖಲಿಸಿರುವಂತೆ ಇಲ್ಲಿದ್ದ ಚೈತ್ಯಾಲಯವು ಅತ್ಯಂತ ಅಲಂಕಾರಿಕವಾಗಿತ್ತು ಹಾಗೂ ಉನ್ನತ ಶಿಖರವನ್ನು ಹೊಂದಿತ್ತು. ಇದೇ ಶಾಸನದಲ್ಲಿ ಧರಣೇಂದ್ರ ಪರ್ವತ, ಜಿನೇಂದ್ರ ಚೈತ್ಯ (ಗುಹಾಂತರ ದೇವಾಲಯಗಳು) ಅಲ್ಲಿನ ಜೈನಬಸದಿಯ ವಿವರಗಳನ್ನು ದಾಖಲಿಸಿದೆ. ಆ ಬಸದಿಯು ಪ್ರಸ್ತುತ ಗೋಪಾಲಕೃಷ್ಣ ದೇವಾಲಯವಾಗಿ ಪರಿವರ್ತಿತವಾಗಿದೆ. ನಂದಿದುರ್ಗವು 'ನಂದಿಗಿರಿ' ಎಂಬ ಹೆಸರಿನಿಂದ ಕರೆಯಲ್ಪಡುವ ಜೈನ ಕ್ಷೇತ್ರವಾಗಿತ್ತೆಂದು ವೃಷಭ ತೀರ್ಥಂಕರರ ಹೆಸರಿನಿಂದ ಕರೆಯುವ 'ವೃಷಭಪರ್ವತ'ವೆಂತಲೂ ಕರೆಯುತ್ತಾರೆ. ಈ ಹೇಳಿಕೆಯು ದೇವಾಲಯದ ಶಿಲ್ಪದಲ್ಲಿ ಕೆತ್ತಿರುವಂತೆ ಪಾರ್ವತಿಗೆ ವಾಹನವಾಗಿ ನಂದಿಯನ್ನು, ಶಿವನ ವಾಹನವಾಗಿ ಸಿಂಹವನ್ನು ತೋರಿಸಿ ಶಾಂತಿ–ಅಹಿಂಸೆಯ ಸಂಕೇತವನ್ನು ಬಿಂಬಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕು ಜಾನಪದ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದೆ. ನಂದಿ ಮತ್ತು ನಂದಿಬೆಟ್ಟಗಳು ಜಾನಪದ ಮತ್ತು ಸಂಸ್ಕೃತಿ ಹಿನ್ನೆಲೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ನಂದಿಮಂಡಲ ವ್ಯಾಪ್ತಿಯಲ್ಲಿ ನಂದಿ ಮತ್ತು ಇತರೆ ವಿಷಯಗಳ ಬಗ್ಗೆ ಜನಪದರು ಮತ್ತು ಮೌಖಿಕ ಕಥನಗಳಿವೆ. ಈ ಪರಿಸರದಲ್ಲಿ ಸ್ಥಳೀಯ ಸಂಸ್ಕೃತಿಗಳು, ಹೊಸದೇವರು, ಬಂಡಿದೇವರು, ಗ್ರಾಮದೇವತೆಗಳ ಆಚರಣೆ, ಹಬ್ಬ, ಜಾತ್ರೆ, ಉತ್ಸವಗಳು ಅನಾದಿಕಾಲದಿಂದಲೂ ನಡೆದುಕೊಂಡು ಬಂದಿವೆ. ನಂದಿಜಾತ್ರೆಯು ರಾಜ್ಯದ ಪ್ರಮುಖ ಜಾತ್ರೆಗಳಲ್ಲಿ ಒಂದಾಗಿದೆ.

ಈ ಭಾಗದಲ್ಲಿ ಗ್ರಾಮೀಣ ಸೊಬಗಿನ ತಮಟೆವಾದನ, ಪಂಡರಿಭಜನೆ, ಗಾರುಡಿಗೊಂಬೆಗಳ ನರ್ತನ, ಬಯಲಾಟ, ಕೇಳಿಕೆಗಳು, ವಿವಿಧ ರೀತಿಯ ಕರಗ ಉತ್ಸವಗಳು ಮುಂತಾದವುಗಳು ಇಂದಿಗೂ ಅಸ್ತಿತ್ವದಲ್ಲಿವೆ. ಬುರ್ರಕಥ, ಕೋಲಾಟ, ಕಣಿ, ತೊಗಲು ಗೊಂಬೆಯಾಟ, ಕರಡಿ ಕುಣಿತ, ಗೊರವಯ್ಯನವೇಷ, ಕೊಂಡರಾಜರ ಶಾಸ್ತ್ರ, ಭವಿಷ್ಯದ ಪದ, ಹುಲಿವೇಷ, ಕೀಲುಕುದುರೆ, ಜಂಗಾಲಪದ, ಹಲಗೆ ತಮಟೆ, ದೊಂಬರಾಟಗಳಂತಹ ಮನರಂಜನೆಯ ಪ್ರಕಾರಗಳಿಗೆ ಹೆಸರಾಗಿದೆ. ವೀರಭದ್ರ ಕುಣಿತ, ಬೀರೆದೇವರ ಡೊಳ್ಳುಕುಣಿತ, ನಂದಿಧ್ವಜ ಕುಣಿತ, ವೀರಗಾಸೆ, ಪಾಳೆಯಗಾರರ ವೇಷ ಮುಂತಾದ ಪ್ರಕಾರಗಳಿಗೆ ಹೆಸರಾಗಿದೆ. ಈ ಭಾಗದಲ್ಲಿ ಭೈರವ ಆರಾಧನೆ ಮತ್ತು ಕರಗದಮ್ಮ ಆಚರಣೆಗಳ ಬಗ್ಗೆ ಚಿಕ್ಕಬಳ್ಳಾಪುರ ಶಾಸನ ಸಂಖ್ಯೆ ಸಿಬಿ–40ರಲ್ಲಿ ಉಕ್ತವಾಗಿದೆ. ಗ್ರಾಮದೇವತೆಗಳಾದ ಗಂಗಮ್ಮ, ಯಲ್ಲಮ್ಮ ಹಾಗೂ ಸಪ್ತಮಾತೃಕೆಯರ ಶಿಲ್ಪಗಳ ಆರಾಧನೆಯು ಅಸ್ತಿತ್ವದಲ್ಲಿರುವುದನ್ನು ಕಾಣಬಹುದಾಗಿದೆ. ಲಜ್ಜೆಗೌರಿ, ಚಂಚುಲಕ್ಷ್ಮಿ ಮುಂತಾದ ಶಿಲ್ಪಗಳು ಈ ಭಾಗದಲ್ಲಿ ಜಾನಪದ ಹಿನ್ನೆಲೆಯ ಶಿಲ್ಪಗಳಾಗಿ ಕಂಡುಬರುತ್ತವೆ.

ಈ ಭಾಗದಲ್ಲಿ ಕನ್ನಡ, ತೆಲುಗು, ತಮಿಳು, ಉರ್ದು ಭಾಷೆಗಳು ಬಳಕೆಯಲ್ಲಿವೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಜಾನಪದ ಸಾಹಿತ್ಯವು

ಇಂದಿಗೂ ಜನಪದರುಗಳಲ್ಲಿ ಜೀವಂತವಾಗಿದೆ. ಕನ್ನಡ ಭಾಷೆಯು ಪ್ರಾಚೀನ ಕಾಲದಿಂದಲೂ ಜನಸಾಮಾನ್ಯರ ಭಾಷೆಯಾಗಿ ಹೊರಹೊಮ್ಮಿದೆ. ಚೋಳರ ಆಕ್ರಮಣದಿಂದ ಮತ್ತು ಅವರ ಆಳ್ವಿಕೆಯಿಂದಾಗಿ ತಮಿಳು ಭಾಷೆಯು ಈ ಭಾಗದಲ್ಲಿ ನೆಲೆಯೂರಿತು. ಹಲವಾರು ವಿದ್ವಾಂಸರು ತಮ್ಮ ಕೃತಿಗಳ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಕುಮುದೇಂದು ರಚಿತ ಸಿರಿಭೂವಲಯ, ಗೋವಿಂದ ಕವಿಯ ನಂದಿ ಮಹತ್ಮೆಂಮ್, ನಂದಿತಿಮ್ಮನ ಪಾರಿಜಾತಪಹರಣಮು, ನಂದಿಮಲ್ಲಯ್ಯನ ಕೃತಿಗಳನ್ನು ಹೆಸರಿಸಬಹುದು.

ಈ ಭಾಗದ ಸ್ತ್ರೀಯರ ಸ್ಥಾನಮಾನದ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ರಾಜಮನೆತನಕ್ಕೆ ಸೇರಿದ ಸ್ತ್ರೀಯರು ಸಾರ್ವಜನಿಕ ರಂಗಗಳಲ್ಲಿ ಪಾತ್ರ ವಹಿಸಿರುವುದು ಕಂಡುಬಂದಿದೆ. ಇವರು ದೇವಾಲಯಗಳನ್ನು ಕಟ್ಟಿಸಿರುವುದು, ದಾನದತ್ತಿ ನೀಡಿರುವುದು, ಅಳ್ವಿಕೆ ಮಾಡಿರುವುದು, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಶಾಸನಗಳಲ್ಲಿ ಮಾಹಿತಿಯಿದೆ. ರಾಷ್ಟ್ರಕೂಟರ ಅರಸ ಮುಮ್ಮಡಿ ಗೋವಿಂದನ ಮಗಳು ಹಾಗೂ ಬಾಣ ರಾಣಿಯೂ ಆದ 'ರತ್ನಾವಳಿ ಅಥವಾ ಮಾಣಿಕಬ್ಬೆ'ಯು ಕ್ರಿ.ಶ 810ಕ್ಕೂ ಪೂರ್ವದಲ್ಲಿ ನಂದಿಯಲ್ಲಿ ಪ್ರಸಿದ್ಧ ಶಿವಾಲಯವನ್ನು ಕಟ್ಟಿಸಿದಳೆಂದು ನಂದಿ ಶಾಸನವು ತಿಳಿಸುತ್ತದೆ. ಈ ಭಾಗದಲ್ಲಿ ಚಿಕ್ಕಬಳ್ಳಾಪುರ, ಸುಗಟೂರು, ಪಾಳೆಯಗಾರರ ವಂಶಕ್ಕೆ ಸೇರಿದ ಹಲಸಮ್ಮ ಎಂಬುವರು ಆಡಳಿತದಲ್ಲಿ ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ.

ನಂದಿಬೆಟ್ಟದಲ್ಲಿ ಹಲವಾರು ಆಕರ್ಷಣೆಗಳಿವೆ. ಅವುಗಳಲ್ಲಿ ಟಿಪ್ಪು ಡ್ರಾಪ್ ಹೆಚ್ಚು ಗಮನವನ್ನು ಸೆಳೆದಿದೆ. ನಂದಿಬೆಟ್ಟದ ಮೇಲೆ ನೈರುತ್ಯದ ಕಡೆಗಿರುವ ಕಡಿದಾದ ಕೋಡುಗಲ್ಲನ್ನು, ಖೈದಿಗಳನ್ನು, ಅಪರಾಧಿಗಳನ್ನು ಶಿಕ್ಷಿಸಲು ಇಲ್ಲಿಂದ ಕೆಳಕ್ಕೆ ತಳ್ಳುವುದಕ್ಕಾಗಿ ಬಳಸುತ್ತಿದ್ದರಿಂದ ಇದನ್ನು 'ಟಿಪ್ಪು ಡ್ರಾಪ್' ಎಂದು ಕರೆಯಲಾಗುತ್ತದೆ. ನಂದಿಬೆಟ್ಟದ ಉತ್ತರದ ಕಡೆಗೆ ಇರುವ ಇನ್ನೊಂದು ಚಿಕ್ಕಬೆಟ್ಟದಲ್ಲಿ ನಂದಿಗ್ರಾಮಕ್ಕೆ ಸಮೀಪದಲ್ಲಿ 'ಹೈದರ್ ಡ್ರಾಪ್' ಎಂಬ ಸ್ಥಳವಿದೆ. ನಂದಿಬೆಟ್ಟದ ಮೇಲೆ ಟಿಪ್ಪುವಿನ ಬೇಸಿಗೆ ಅರಮನೆಯಿದೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯವರು ತಮ್ಮ ಆರೋಗ್ಯದ ಸುಧಾರಣೆಗಾಗಿ ಮತ್ತು ವಿಶ್ರಾಂತಿ ಪಡೆಯಲು ನಂದಿಬೆಟ್ಟಕ್ಕೆ 1927ರಲ್ಲಿ ಮತ್ತು 1936ರಲ್ಲಿ ಭೇಟಿ ನೀಡಿದ್ದರು. ಹೀಗಾಗಿ ಗಾಂಧೀಜಿಯವರು ತಂಗಿದ್ದ ಭವನವನ್ನು ಗಾಂಧಿಭವನ ಎಂತಲೂ, ನೆಹರುರವರು ತಂಗಿದ್ದ ಭವನವನ್ನು ನೆಹರು ಭವನ ಎಂದು ಕರೆಯಲಾಗುತ್ತದೆ.

ನಂದಿಬೆಟ್ಟವು ಉತ್ತಮ ನೈಸರ್ಗಿಕ ಪರಿಸರ ಮತ್ತು ಹವಾಗುಣದಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಮುಂಜಾನೆಯ ಸೂರ್ಯೋದಯ, ಮೋಡಗಳು, ಮಂಜಿನ ಹೊಗೆ, ಪ್ರಾಣಿ–ಪಕ್ಷಿಗಳ ಕಲರವ ಆಹ್ಲಾದಕರ ವಾತಾವರಣವನ್ನು ಸವಿಯಲು ಪ್ರವಾಸಿಗರು ರಜಾದಿನಗಳು, ವಾರಾಂತ್ಯದಲ್ಲಿ ಕ್ರಿಸ್‌ಮಸ್ ಹಾಗೂ ಹೊಸವರ್ಷದ ಸಂದರ್ಭಗಳಲ್ಲಿ ಇಲ್ಲಿಗೆ ಹೆಚ್ಚಾಗಿ ಭೇಟಿ ನೀಡುತ್ತಿದ್ದಾರೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಮಹತ್ವ ಬಂದಿದ್ದು ಇಲ್ಲಿ ಅಂಗಡಿಗಳು, ಹೋಟೆಲ್‌ಗಳು, ರೆಸಾರ್ಟ್‌ಗಳು ಅಸ್ತಿತ್ವಕ್ಕೆ ಬಂದಿವೆ. ಇದರಿಂದಾಗಿ ಸ್ಥಳೀಯರು ಮತ್ತು ಇತರರಿಗೆ ಉದ್ಯೋಗಾವಕಾಶಗಳು ಲಭಿಸಿ ಆರ್ಥಿಕ ಸಬಲೀಕರಣಕ್ಕೆ ಸಹಾಯಕವಾಗಿದೆ. ನಂದಿಬೆಟ್ಟಕ್ಕೆ ಭೇಟಿ ನೀಡುವ ಪ್ರವಾಸಿಗರಿಂದ ಹಾಗೂ ಪ್ರವಾಸಿಗರ ವಾಹನಗಳಿಂದ ಪ್ರವೇಶ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದ್ದು ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಪ್ರವಾಸಿಗರನ್ನು ಆಕರ್ಷಿಸಲು ಇಲ್ಲಿ ವ್ಯೂವ್ ಪಾಯಿಂಟ್, ಮೌಂಟ್ ವೀವ್‌ಗಳು ಹಾಗೂ ಬಿದಿರಿನ ಮನೆಗಳನ್ನು ನಿರ್ಮಿಸಲಾಗಿದೆ. ನಂದಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪರಿಸರಸ್ನೇಹಿ ವಾತಾವರಣಕ್ಕೆ ಆದ್ಯತೆ ನೀಡಲಾಗಿದೆ. ಇತ್ತೀಚೆಗೆ ಕರ್ನಾಟಕ

ಸರ್ಕಾರವು ರೋಪ್–ವೇ ನಿರ್ಮಿಸಲು ಯೋಜನೆಯನ್ನು ರೂಪಿಸಿದೆ.

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ. ಎಂ. (1966). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಮೈಸೂರು ವಿಶ್ವವಿದ್ಯಾನಿಲಯ.
- *ಕೋಲಾರ ಜಿಲ್ಲಾ ಗ್ಯಾಸೆಟಿಯರ್.* (2005). ಗ್ಯಾಸೆಟಿಯರ್ ಇಲಾಖೆ. ಕರ್ನಾಟಕ ಸರ್ಕಾರ.
- ಪುಟ್ಟಣ್ಣ ಎಂ.ಎಸ್. (1926). *ಗುಮ್ಮನಾಯಕನಹಳ್ಳಿ ಪಾಳೆಗಾರರು.* ಬೆಂಗಳೂರು.
- ರೈಸ್. ಬಿ.ಎಲ್. (1905). *ಎಪಿಗ್ರಾಫಿಯ ಕರ್ನಾಟಿಕ ಸಂಪುಟ–10–ಕೋಲಾರ ಜಿಲ್ಲೆ.*
- ತಿಪ್ಪೇರುದ್ರಸ್ವಾಮಿ.ಎಚ್. (2015). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಡಿ.ವಿ.ಕೆ ಮೂರ್ತಿ
- ವೇಮಗಲ್ ಸೋಮಶೇಖರ್, (2014). *ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ.* ಕರ್ನಾಟಕ ಗಾಂಧಿ ಸ್ಮಾರಕ ನಿಧಿ.